

**ಕಿವಿಮಾತು**

ಏರುಗತಿಯ ಉಸಿರಾಟದೊಂದಿಗೆ ಜ್ವರ ಬರುತ್ತಿದ್ದರೆ ಅದು ನ್ಯುಮೋನಿಯಾದ ಲಕ್ಷಣವಾಗಿರಬಹುದು. ತಡಮಾಡದೆ ವೈದ್ಯರಲ್ಲಿ ತೋರಿಸಿ.

**ಕಿವಿಮಾತು**

ಪ್ರಯೋಗಶಾಲಾ ಪರೀಕ್ಷೆಗಳನ್ನು ಮಾಡಿಸುವಂತೆ ನೀವಾಗಿಯೇ ವೈದ್ಯರನ್ನು ಒತ್ತಾಯಿಸಬೇಡಿ. ಅಗತ್ಯವೆನಿಸಿದರೆ ಅವರೇ ಶಿಫಾರಸ್ಸು ಮಾಡುತ್ತಾರೆ.

**ಕಿವಿಮಾತು**

ಜ್ವರವೇ ಒಂದು ಕಾಯಿಲೆಯಲ್ಲ. ಜ್ವರದ ಕುರಿತು ಚಿಂತಿಸುವ ಬದಲು ಜ್ವರಕ್ಕೆ ಕಾರಣವಾಗಿರುವ ಕಾಯಿಲೆಯಿಂದ ಮುಕ್ತಿ ಹೊಂದುವತ್ತ ಗಮನಹರಿಸಬೇಕು.




ಹೆಚ್ಚಿನ ಅವಧಿಯ ಜ್ವರವನ್ನು 'ದೀರ್ಘಾವಧಿ ಜ್ವರ'ವೆಂತಲೂ ಪರಿಗಣಿಸಲಾಗುತ್ತದೆ. ಹಾಗೆಯೇ ಅಲ್ಪಾವಧಿ ಜ್ವರವನ್ನು 'ಸುಳುಹು ರಹಿತ' ಮತ್ತು 'ಸುಳುಹು ಸಹಿತ' ಎಂದು ಮತ್ತೆ ಎರಡು ಗುಂಪುಗಳಾಗಿ ವಿಂಗಡಿಸಬಹುದು.

## ಸುಳುಹು ರಹಿತ ಜ್ವರ

ಇದರ ಅತ್ಯಂತ ಸಾಮಾನ್ಯ ಕಾರಣವೆಂದರೆ ವೈರಾಣುಗಳ ಸೋಂಕು. ಹಾಗೆಯೇ ರಕ್ತದ ನಂಜು, ಮೂತ್ರಾಂಗ ವ್ಯೂಹದ ಸೋಂಕು, ಹೃದಯದ ಒಳಪದರದ ಉರಿಯೂತದಂಥ ಗಂಭೀರ ಸ್ವರೂಪದ ಸಮಸ್ಯೆಗಳಲ್ಲಿಯೂ ಸಾಮಾನ್ಯವಾಗಿ ಯಾವುದೇ ಸುಳುಹುಗಳಿರುವುದಿಲ್ಲ. ಕೆಲವು ಪ್ರಯೋಗಶಾಲಾ ಪರೀಕ್ಷೆಗಳ ಮೂಲಕವಷ್ಟೇ ಅಂತಹವುಗಳನ್ನು ಪತ್ತೆಹಚ್ಚಲು ಸಾಧ್ಯವಿದೆ.

## ಸುಳುಹು ಸಹಿತ ಜ್ವರ

ಇವುಗಳಲ್ಲಿ ಸರ್ವೇಸಾಮಾನ್ಯವಾದವುಗಳೆಂದರೆ ಮೂಗಿನ ಕುಳಿಯ (ಸೈನಸ್‌ನ) ಉರಿಯೂತ, ಮಧ್ಯಕಿವಿಯ ಉರಿಯೂತ, ಗಂಟಲಿನ ಉರಿಯೂತ, ಮೂಳೆ ಮತ್ತು ಕೀಲುಗಳ ಉರಿಯೂತ, ಕೀವುಗಡ್ಡೆಗಳು, ಇತ್ಯಾದಿ. ಸಾಮಾನ್ಯವಾಗಿ ದೈಹಿಕ ಪರೀಕ್ಷೆಗಳಿಂದಲೇ ಇಂತಹವುಗಳನ್ನು ಪತ್ತೆಹಚ್ಚಲು ಸಾಧ್ಯವಿದೆ. ದೃಢೀಕರಿಸಲು ಕೆಲ ಪರೀಕ್ಷೆ ಮಾಡಬೇಕಾಗುತ್ತದೆ.

ಹರಡುವ ವಿಧಾನಗಳಿಗನುಗುಣವಾಗಿ ಜ್ವರವನ್ನುಂಟುಮಾಡಬಲ್ಲ ಕಾಯಿಲೆಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು.

1. ಕಲುಷಿತ ನೀರು ಮತ್ತು ಆಹಾರಗಳಿಂದ ಉಂಟಾಗುವ ಕಾಯಿಲೆಗಳು: ಇವುಗಳಲ್ಲಿ ಮುಖ್ಯವಾದವುಗಳೆಂದರೆ ರೋಟಾ ವೈರಾಣುವಿನ ಅತಿಸಾರ ಭೇದಿ, ಕಾಮಾಲೆ, ಲೆಪ್ಟೋಸ್ಪೈರೋಸಿಸ್, ಟೈಫಾಯಿಡ್ (ವಿಷಮಶೀತ ಜ್ವರ), ಇತ್ಯಾದಿ.
2. ರೋಗವಾಹಕಗಳಿಂದ ಹರಡುವ ಕಾಯಿಲೆಗಳು: ಸೊಳ್ಳೆಗಳ ಮುಖಾಂತರ – ಮಲೇರಿಯಾ, ಡೆಂಗಿ, ಚಿಕುನ್‌ಗುನ್ಯಾ, ಜಪಾನೀಸ್ ಬಿ ಎನ್ ಸೆಫಲೈಟಿಸ್ ಇತ್ಯಾದಿ. ನೊಣಗಳ ಮುಖಾಂತರ – ವಿಷಮಶೀತ ಜ್ವರ (ಟೈಫಾಯಿಡ್), ಕಾಮಾಲೆ, ರಕ್ತ ಭೇದಿ, ಇತ್ಯಾದಿ. ಉಣ್ಣೆಗಳ ಮುಖಾಂತರ – ರಿಕೆಟ್ಸಿಯಾ ಜ್ವರ, ಮಂಗನ ಕಾಯಿಲೆ (ಕೆಎಫ್‌ಡಿ), ಇತ್ಯಾದಿ.
3. ನೇರ ಸಂಪರ್ಕ ಮತ್ತು ತುಂತುರು ಹನಿಗಳ ಮುಖಾಂತರ ಹರಡುವ ಕಾಯಿಲೆಗಳು: ಸಾಮಾನ್ಯ ನೆಗಡಿ, ಫ್ಲೂ (ಹಂದಿ ಜ್ವರ, ಹಕ್ಕಿ ಜ್ವರ, ಕೊರೊನಾ) ಇತ್ಯಾದಿ.

ಕಲುಷಿತ ನೀರು ಮತ್ತು ಆಹಾರಗಳಿಂದ ಉಂಟಾಗುವ ಕಾಯಿಲೆಗಳ ಬಗ್ಗೆ ಕೊಂಚ ವಿವರವಾಗಿ ನೋಡೋಣ.

ಭಾರತದೊಂದಿಗೆ ವಿಶ್ವವನ್ನೇ ಕಂಗೆಡಿಸಿದ ಕೊರೊನಾ